# ಸಮಗ್ರ ಶಿಕ್ಷಣ-ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01,ದೂರವಾಣಿ: 080-22483580, 22484720, ಫಾಕ್ಸ್ : 080-22104179, 22126718 ಇ-ಮೇಲ್: kpsssk2018@gmail.com


ಸಂಖ್ಯೆ:12739/ಎಸ್.ಎಸ್.ಕೆ/ಕೆಪಿಎಸ್/ ವಿ.ಕಾರ್ಯಾಗಾರ/2019-20 ದಿನಾಂಕ:27.08.2019

## ಜ್ಞಾಪನ

ವಿಷಯ:- ಕರ್ನಾಟಕ ಪಬ್ಲಿಕ್ ಶಾಲೆಗಳ ಸಿಬ್ಬಂದಿ ಹಾಗೂ ಇತರೆ ಅಧಿಕಾರಿಗಳಿಗೆ ವಿಭಾಗೀಯ ಮಟ್ಟದ ಕಾರ್ಯಗಾರವನ್ನು ನಡೆಸುವ ಕುರಿತು.

ಉಲ್ಲೇಖ: ದಿನಾಂಕ:20.08.2019 ರಂದು ಈ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ.

*************

ರಾಜ್ಯದಲ್ಲಿ 1 ರಿಂದ 12ನೇ ತರಗತಿಯವರೆಗೆ ಒಂದೇ ಸೂರಿನಡಿಯಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಒಟ್ಟು 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹಾಗೂ 2019-20 ನೇ ಸಾಲಿನಲ್ಲಿ ಸದರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು 1ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಲಾಗಿದೆ.

ಕರ್ನಾಟಕ ಪಬ್ಲಿಕ್ ಶಾಲೆಗಳ ಸಮಗ್ರ ಅಭಿವೃದ್ಧಿಗಾಗಿ ಶೈಕ್ಷಣಿಕ ಹಾಗೂ ಮೂಲ ಸೌಕರ್ಯಗಳ ವ್ಯವಸ್ಥೆಗೆ ದೂರದೃಷ್ಟಿ ಹೊಂದಿರುವ ಮೂಲಭೂತ ಸೌಲಭ್ಯಗಳ ಯೋಜನೆ, ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿ ಯೋಜನೆಯನ್ನು ಹಾಗೂ 1 ರಿಂದ 12ನೇ ತರಗತಿಗಳನ್ನು ಉತ್ತಮವಾಗಿ ನಿರ್ವಹಿಸಲುಬೇಕಾದ ಆಡಳಿತಾತ್ಮಕ ಯೋಜನೆಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿ, ಇವುಗಳನ್ನು ಉತ್ಕೃಷ್ಟತೆ ಕೇಂದ್ರವಾಗಿ ನಿರ್ಮಿಸುವ ಅವಶ್ಯವಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಭಾಗೀದಾರರಿಗೆ ಒಂದು ದಿನದ ವಿಭಾಗೀಯ ಮಟ್ಟದ ಕಾರ್ಯಾಗಾರಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಅದರಂತೆ ರಾಜ್ಯದ 276 ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾಂಶುಪಾಲರು, ಉಪಪ್ರಾಂಶುಪಾಲರು ಮತ್ತು ಮುಖ್ಯಶಿಕ್ಷಕರು - (ಒಟ್ಟು ಮೂರು ಜನ) ಹಾಗೂ ತಾಲ್ಲೂಕು ಹಂತದ ಅಧಿಕಾರಿಗಳಾದ ಬಿಇಒ ಡಯಟ್‌ನ ತಾಲ್ಲೂಕು ಕೆಪಿಎಸ್ ನೋಡಲ್ ಅಧಿಕಾರಿ, ಬಿ.ಆರ್.ಸಿ ಸಮನ್ವಯಾಧಿಕಾರಿ (ಒಟ್ಟು ಮೂರು ಜನ) ಹಾಗೂ ಜಿಲ್ಲಾ ಹಂತದ ಅಧಿಕಾರಿಗಳಾದ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು (ಇಬ್ಬರೂ), ಉಪನಿರ್ದೇಶಕರ ಕಚೇರಿಯ ಒಬ್ಬ ಶಿಕ್ಷಣಾಧಿಕಾರಿ ಮತ್ತು ಒಬ್ಬ ವಿಷಯ ಪರಿವೀಕ್ಷಕರು, ಒಬ್ಬ ಎಪಿಸಿ ಹಾಗೂ ಜಿಲ್ಲಾ ಕೆಪಿಎಸ್ ನೋಡಲ್ ಅಧಿಕಾರಿ (ಒಟ್ಟು ಒಂಬತ್ತು ಜನ) ಗಳಿಗೆ ಲಗತ್ತಿಸಿರುವ ಪಟ್ಟಿಯಂತೆ ವಿಭಾಗೀಯ ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

ವಿಭಾಗೀಯ ಮಟ್ಟದ ಕಾರ್ಯಾಗಾರ ನಡೆಯುವ ಸ್ಥಳಗಳಾದ ಬೆಂಗಳೂರು ದಕ್ಷಿಣ, ದಾವಣಗೆರೆ, ಹಾಸನ, ಮೈಸೂರು, ಕಲ್ಬುರ್ಗಿ, ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾಶಿಇ ಇವರು ಪಟ್ಟಿಯಲ್ಲಿ ಲಗತ್ತಿಸಿರುವಂತೆ ಕಾರ್ಯಾಗಾರಕ್ಕೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ, ಸಂಬಂಧಿಸಿದ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಹಾಗೂ ಕಾರ್ಯಾಗಾರ ನಡೆಯುವ ಸ್ಥಳವನ್ನು ನಿಗದಿಪಡಿಸಿ, ಈ ಬಗ್ಗೆ ತಮಗೆ ಹಂಚಿಕೆಯಾಗಿರುವ ಜಿಲ್ಲೆಯ ಉಪನಿರ್ದೇಶಕರು(ಆಡಳಿತ), ಸಾಶಿಇ ಇವರಿಗೆ ಪತ್ರ ಮುಖೇನ ಸಂಬಂಧಿಸಿದವರೆಲ್ಲರೂ ಕಾರ್ಯಾಗಾರಕ್ಕೆ ಹಾಜರಾಗುವಂತೆ ತಿಳಿಸಿ, ಈ ಕಚೇರಿಗೆ ಮಾಹಿತಿ ನೀಡುವುದು. ಈ ಸಂಬಂಧ ರಾಜ್ಯ ಕಚೇರಿಯಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ಪೂರ್ವಭಾವಿ ಸಭೆಗೆ ನೋಡಲ್ ಅಧಿಕಾರಿಯು ಹಾಜರಾಗಲು ಸೂಚಿಸಿದೆ.

ಕಾರ್ಯಾಗಾರ ನಡೆಯುವ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾಶಿಇ ಇವರ ಸರ್ವ ಶಿಕ್ಷಣ ಅಭಿಯಾನ ಖಾತೆಗೆ ಪಟ್ಟಿಯಲ್ಲಿ ಲಗತ್ತಿಸಿರುವ ಭೌತಿಕ ಸಂಖ್ಯೆಗನುಗುಣವಾಗಿ ತಲಾ ರೂ.500.00 ರಂತೆ ಘಟಕ ವೆಚ್ಚವನ್ನು ರಾಜ್ಯ ಕಚೇರಿಯಿಂದ ಬಿಡುಗಡೆ ಮಾಡಲಾಗುವುದು. ಈ ಅನುದಾನದಲ್ಲಿ ಕಾರ್ಯಾಗಾರಕ್ಕೆ ಹಾಜರಾಗುವರೆಲ್ಲರಿಗೂ ಎರಡು ಬಾರಿ ಕಾಫಿ/ಟೀ, ಮಧ್ಯಾಹ್ನದ ಊಟ, ಕುಡಿಯುವ ನೀರು, ಲೇಖನ ಸಾಮಗ್ರಿಗಳು, ಮುದ್ರಣ ವೆಚ್ಚ, ಕೆಪಿಎಸ್ ಶಾಲೆಯ ಪ್ರಾಂಶುಪಾಲರು, ಉಪಪ್ರಾಂಶುಪಾಲರು ಮತ್ತು ಮುಖ್ಯಶಿಕ್ಷಕರಿಗೆ ಮಾತ್ರ ಟಿಎ/ಡಿಎ ಭತ್ಯೆ, ಇತರೆ ವೆಚ್ಚವನ್ನು ಭರಿಸುವುದು (ವಿವರಗಳನ್ನು ನಂತರ ಒದಗಿಸಲಾಗುವುದು) ಹಾಗೂ ಬಾಕಿ ಉಳಿದ ಅನುದಾನವನ್ನು ರಾಜ್ಯ ಕಚೇರಿಗೆ ಸಲ್ಲಿಸಲು ತಿಳಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

**ಪ್ರತಿಗಳನ್ನು ಅಗತ್ಯ ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು–1 & 2, ಸರ್ವ ಶಿಕ್ಷಣ ಅಭಿಯಾನ.
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ.
6. 276 ಕೆಪಿಎಸ್ ಶಾಲೆಗಳ ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ.

**ಪ್ರತಿಯನ್ನು ಗೌರವಪೂರ್ವಕವಾಗಿ:**

1. ಪ್ರಧಾನ ಕಾರ್ಯದರ್ಶಿಗಳು(ಪ್ರಾ & ಪ್ರೌ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಉಪನಿರ್ದೇಶಕರು, ಪಪೂಇ, ಇವರನ್ನು ಕಾರ್ಯಾಗಾರಕ್ಕೆ ಹಾಜರಾಗುವಂತೆ ಸೂಚಿಸಲು ಕೋರಿದೆ.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು.
5. ಅಪರ ಆಯುಕ್ತರು, ಕಲ್ಬುರ್ಗಿ ಮತ್ತು ಬೆಳಗಾವಿ ವಿಭಾಗ, ಸಾರ್ವಜನಿಕ ಶಿಕ್ಷಣ ಇಲಾಖೆ.